**ಓ.ಎಸ್ ನಂ. 135/2016 ಡಿ.ಡಬ್ಲ್ಯೂ-1 (ಅಮೀರ್ ಜಾನ್)**

**ಸಾಕ್ಷಿಯನ್ನು ದಿನಾಂಕಃ 22.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ ಎಸ್ ಎಸ್ ವಕೀಲರಿಂದಃ**

5. ಸಾಕ್ಷಿಗೆ ನೀವು ಎಷ್ಟು ಬಾಷೆಯಲಿ ಸಹಿ ಮಾಡುತ್ತೀರಾ ಎಂದರೆ ಸಾಕ್ಷಿಯು ನಾನು ಮದುವೆಯಾಗುವ ಮೊದಲು ಕನ್ನಡದಲ್ಲಿ ಸಹಿ ಮಾಡುತ್ತಿದ್ದೆ, ಮದುವೆಯಾದ ನಂತರ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ. (ಈ ಹಂತದಲ್ಲಿ ನ್ಯಾಯಾಲಯವು ನೀವು ಎಷ್ಟು ಬಾಷೆಯಲ್ಲಿ ಸಹಿ ಮಾಡುತ್ತೀರಾ ಅದಕ್ಕೆ ಉತ್ತುರಿಸಬೇಕು ಎಂದಾಗ ಸಾಕ್ಷಿಯು ನಾನು ಒಂದೇ ಭಾಷೆಯಲ್ಲಿ ಸಹಿ ಮಾಡುತ್ತೇನೆ ಎಂದು ನುಡಿಯುತ್ತಾರೆ) ಪ್ರತಿವಾದಿ 1 ಬಿಲಾಲ್ ರವರ ಗಂಡನ ಹೆಸರು ಅಬ್ದುಲ್ಲಾ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದೇನೆ ಪ್ರತಿವಾದಿ ರವರ ಗಂಡ ಬೇರೆ ಇದ್ದರೆ ಎಂದು ತೋರಿಸಲು ದಾಖಲಾತಿ ಇರುತ್ತದೇಯೇ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ರವರ ಗಂಡನ ಹೆಸರು ಮಕ್ಬೂಲ್ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರಿದು ಮಕ್ಬೂಲ್ ಎಂದು ತೋರಿಸಲು ದಾಖಲಾತಿಗಳನ್ನು ನಾನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿ ಬಿಲಾಲ್ ರವರ ಗಂಡನ ಹೆಸರು ಮಕ್ಬೂಲ್ ಎಂದು ಹೇಳಿ ಬರೆಸಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ಅಬ್ದುಲ್ಲಾ ಎಂಬುವವರು ಓದಿರುತ್ತಾರೆ ಸಹಿ ಮಾಡಿರುತ್ತಾರೆ ಎಂದು ತಿಳಿಸಿದ್ದು, ಅವರು ಸಹಿಯನ್ನು ಇಂಗ್ಲೀಷ್ ನಲ್ಲಿ ಮಾಡುತ್ತಾರೆ.

6. ದಾವಾ ಐಟಂ ನಂ.1 ರ ಆಸ್ತಿಯು ಅಬ್ದುಲ್ಲಾ ನನ್ನ ಅಣ್ಣ ನವರಿಗೆ ಮಂಜೂರಾಗಿರುತ್ತದೆ. ಸರ್ವೆ ನಂಬರ್ 64 ಐಟಂ ನಂಬರ್ 1 ರ ದಾವಾಸ್ತಿಯು ಒಟ್ಟು 4 ಎಕರೆ 24 ಗುಂಟೆ ಇರುತ್ತದೆ. ಸದರಿ ಜಮೀನಿನ ಉತ್ತರಕ್ಕೆ ಮಲ್ಲಮ್ಮ

ನವರು ಜಮೀನು, ಸಾಕ್ಷಿಯು ಮುಂದುವರಿದು ನನ್ನ ಜಮೀನಿನ ಮುಂಭಾಗಕ್ಕೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮಲ್ಲಮ್ಮ ನವರ ಜಮೀನಿನ ಸರ್ವೆ ನಂಬರ್ ನನಗೆ ತಿಳಿದಿರುವುದಿಲ್ಲ. ಐಟಂ ನಂಬರ್ 1 ರ ದಾವಾಸ್ತಿಯು ಉತ್ತರಕ್ಕೆ ಮಲ್ಲಮ್ಮ ನವರ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ದಕ್ಷಿಣಕ್ಕೆ ಬೆಟ್ಟ ಇರುತ್ತದೆ. ನನಗೆ ಸದರಿ ಜಮೀನಿನ ಚಕ್ಕು ಬಂದಿ ತಿಳಿಯದೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಐಟಂ ನಂ 2 ರ ಸ್ವತ್ತು ಸರ್ವೆ ನಂಬರ್ 65 ರ ಜಮೀನು ನನ್ನ ತಂದೆ ದಸ್ತಗೀರ್ ರವರಿಗೆ ಮಂಜೂರಾಗಿರುತ್ತದೆ. ಸದರಿ ದಸ್ತಗೀರ್ ರವರ ತಂದೆಯ ಹೆಸರು ಕಮಾಲ್ ಸಾಬ್. ನನ್ನ ಲಿಖಿತ ಹೇಳಿಕೆಯಲ್ಲಿಯು ದಸ್ತಗೀರ್ ತಂದೆಯ ಹೆಸರು ಕಮಾಲ್ ಸಾಬ್ ಎಂದು ಹೇಳಿ ಬರೆಸಿರುತ್ತೇನೆ. ನನ್ನ ತಂದೆಯ ಹೆಸರು ದಸ್ತಗೀರ್ ಆಗಿರುವುದಿಲ್ಲ ಮತ್ತು ಸದರಿ ದಸ್ತಗೀರ್ ತಂದೆಯ ಹೆಸರು ಕಮಾಲ್ ಸಾಬ್ ಆಗಿರುವುದಿಲ್ಲ ಅದೇ ರೀತಿ ನನ್ನ ಲಿಖಿತ ಹೇಳಿಕೆಯಲ್ಲಿಯು ಸಹ ತಪ್ಪು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ದಸ್ತಗೀರ್ ರವರ ತಂದೆಯ ಹೆಸರು ಕಮಾಲ್ ಸಾಬ್ ಎಂದು ಹೇಳಿ ಬರೆಸಿರುತ್ತೇನೆ.

8. ನಾನು, ಪ್ರತಿವಾದಿ 17 ಮತ್ತು 19 ರವರು ಸೇರಿ ದಸ್ತಗೀರ್ ಮಗ ಅಲ್ಲದೆ ಇದ್ದರೂ ಸಹ ನಾನು ದಸ್ತಗೀರ್ ಮಗ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಅಬ್ದುಲ್ಲಾ ರವರು ಇಂಜೇನಿಯರ್ ಆಗಿರುವುದು ಇಲ್ಲ ಮತ್ತು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 4 ರಂತೆ ಅಬ್ದುಲ್ಲಾ ರವರು ಸರ್ಕಾರಕ್ಕೆ ದಾವಾಸ್ತಿಯನ್ನು ಮಂಜೂರು ಮಾಡಿಕೊಡಿ ಎಂದು ಅರ್ಜಿ ಕೊಟ್ಟಿರುವುದನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ನಿಪಿ 4 ರಲ್ಲಿ ಅರ್ಜಿದಾರರು ಸಹಿ ಮಾಡಿರುವ ಸಹಿಯನ್ನು ತೋರಿಸಿ ಯಾವ ಭಾಷೆಯಲ್ಲಿ ಸಹಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಸಹಿಯನ್ನು ಕನ್ನಡದಲ್ಲಿ

ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 4 ರಲ್ಲಿ ಅಬ್ದುಲ್ಲಾ ರವರು ಬೇರೆಯವರು ತೋರಿಸಿಕೊಟ್ಟಂತೆ ನೋಡಿ ಸಹಿ ಮಾಡಿರುವ ಹಾಗೇ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಅಬ್ದುಲ್ಲಾ ಬಿನ್ ದಸ್ತಗೀರ್ ಸಾಬ್ ರವರು ಓದಿರಲೇ ಇಲ್ಲ ಅವರು ಅವಿದ್ಯಾವಂತರಾಗಿದ್ದರು ಎಂದರೆ ಸರಿಯಲ್ಲ.

9. ಸಾಕ್ಷಿಗೆ ಈ ಹಿಂದೆ ಸಾಕ್ಷಿ ನುಡಿಯುಲು ಬಂದಾಗ ಕೋರ್ಟಿನಿಂದ ಕಳುಹಿಸಿದ ಸಮನ್ಸನ್ನು ಸ್ವೀಕರಿಸಿರುವುದಿಲ್ಲ ಎಂದು ತಿಳಿಸಿರುತ್ತೀರಿ, ಅದು ಯಾವ ಕಾರಣಕ್ಕಾಗಿ ಕೋರ್ಟಿನಿಂದ ಬಂದ ಸಮನ್ಸ್ ಅನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸಾಕ್ಷಿಯ ಆ ಸಮಯದಲ್ಲಿ ನನ್ನ ಅಪ್ಪ ತೀರಿಕೊಂಡಿದ್ದರು ಮತ್ತು ನನ್ನ ಅಣ್ಣ ದೆಹಲಿಗೆ ಹೋಗಿದ್ದರು ಆದುದ್ದರಿಂದ ನಾನು ನ್ಯಾಯಾಲಯದಿಂದ ಬಂದ ಸಮನ್ಸನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಮನ್ಸ್ ಅನ್ನು ಪೋಸ್ಟ್ ಮ್ಯಾನ್ ತಂದಿದ್ದರು ಯಾವ ಕೋರ್ಟಿನ ಸಮನ್ಸ್ ಎಂದು ತಿಳಿದಿರಲಿಲ್ಲ. ನನಗೆ ಸಮನ್ಸ್ 2016 ರಲ್ಲಿ ನ್ಯಾಯಾಲಯದಿಂದ ಬಂದಿತ್ತು ನಂತರ ನಾನು 2023 ರಲ್ಲಿ ನಾವಾಗಿ ನ್ಯಾಯಾಲಯಕ್ಕೆ ಬಂದು ಹಾಜರಾಗಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ 2016 ರಲ್ಲಿ ಸಮನ್ಸ್ ಬಂದ ಬಗ್ಗೆ ತಿಳಿದಿದ್ದರೂ ಸಹ 2023 ರಲ್ಲಿ ನ್ಯಾಯಾಲಯಕ್ಕೆ ಬಂದಿರುತ್ತೀರಾ ಅದಕ್ಕೆ ಏನು ಕಾರಣ ಎಂದರೆ ಸಾಕ್ಷಿಯು ನಾವು ಜಮೀನು ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯಲ್ಲಿ ದಾವಾಸ್ತಿಯ ಖಾತೆಯು ನಾಗರಾಜು ರವರ ಹೆಸರಿಗೆ ಬದಲಾವಣೆ ಯಾಗದೆ ಇರುವ ಬಗ್ಗೆ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ರವರುಗಳು ಎಷ್ಟು ಜನರ ದಾವೆಯನ್ನು ಹೂಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ವಾದಿಗಳು ವಾದ ಪತ್ರದಲ್ಲಿ ಯಾರ ಯಾರ ಮೇಲೆ ದಾವೆ ಮಾಡಿರುತ್ತಾರೆ ಎಂದು ಹೇಳಿ ಬರೆಸಿರುತ್ತಾರೆ ಅದನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಸುಳ್ಳು ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ವಾದ ಪತ್ರದಲ್ಲಿ ಯಾವುದೇಲ್ಲಾ ವಿಷಯಗಳನ್ನು ಹೇಳಿ ಬರೆಸಲಾಗಿರುತ್ತದೆಯೋ ಅದನ್ನೆಲ್ಲಾ

ಓದಿಕೊಂಡು ನಂತರ ಲಿಖಿತ ಹೇಳಿಕೆಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅವರೇ ನ್ಯಾಯಾಲಯಕ್ಕೆ ಹಾಜರು ಮಾಡಿದ ಲಿಖಿತ ಹೇಳಿಕೆಯನ್ನು ತೋರಿಸಲಾಗಿ ಸಾಕ್ಷಿಯು ಸಹಿಯನ್ನು ನೋಡಿ ನನ್ನದೇ ಸಹಿ ಎಂದು ಗುರುತಿಸಿರುತ್ತಾರೆ ಸಾಕ್ಷಿಗೆ ಪುನಃ ಸದರಿ ಲಿಖಿತ ಹೇಳಿಕೆಯನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಲಾಯರ್ ರವರು ಬರೆದಿರುತ್ತಾರೆ ನಂತರ ಓದಿ ಹೇಳಿ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ